www.bwssb.karnataka.gov.in Telephone: 080-22945253

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

# BANGALORE WATER SUPPLY AND SEWERAGE BOARD

ಮುಖ್ಯ ಅಭಿಯಂತರರು(ವಿನ್ಯಾಸ ಮತ್ತು ಗುಣ ಆಶ್ವಾಸನೆ) ರವರ ಕಛೇರಿ

9 ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009

**ಸಂ: ಬೆಂ.ಜ.ಮಂ/ಮು.ಅ(ವಿ.ಗು.ಆ)/ಅ.ಮು.ಅ(ವಿ)/ತಾ.ಸ/ಸ.ಅ(ವಿ)/538/2022-23 ದಿನಾಂಕ: 27.07.2022**

---

## ಸುತ್ತೋಲೆ

**ವಿಷಯ:** 2022-23ನೇ ಆರ್ಥಿಕ ವರ್ಷದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ಅನುಸೂಚಿ ದರಪಟ್ಟಿ: 2021-22 ಸಂಪುಟ-5ರಲ್ಲಿ M S ಕೊಳವೆಗಳ ದರಗಳ ಪರಿಷ್ಕರಣೆಯ ಕುರಿತ ಸ್ಪಷ್ಟೀಕರಣ.

**ಉಲ್ಲೇಖ:**

1. ಆ.ಸಂ: ಲೋ.ಇ-51 ಆರ್‌ಡಿಎಫ್ 2019,ಬೆಂಗಳೂರು ದಿ:25.03.2022.
2. ಸ.ಆ.ಸಂ.ನ.ಅ.ಇ 08/ಐಎನ್‌ಐ2021 (ಇ-ಕಛೇರಿ), ಬೆಂಗಳೂರು ದಿ:04.12.2021.
3. ಸಂ.ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ತಾ.ಸ(ವಿ)/2659/2021-22 ದಿ:25.03.2022
4. ಸಂ.ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ತಾ.ಸ(ವಿ)/04/2022-23 ದಿ:05.04.2022
5. ಸಂ: ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ತಾ.ಸ(ವಿ)/ಸ.ಅ(ವಿ)/419/2022-23 ದಿ:07.07.2022
6. ಸಂ:ಮುಸದ/ತಾಂ.-2/ಸ.ಇಂ.3/ದರಪಟ್ಟಿ/2022-23/2504 ದಿ: 26.07.2022

****************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ಉಲ್ಲೇಖ (2) ರ ಆದೇಶದನ್ವಯ ರಚಿತವಾಗಿರುವ ಏಕರೂಪ ದರಪಟ್ಟಿ ತಯಾರಿಕೆ ಸಮಿತಿಯು ತಯಾರಿಸಿರುವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ಅನುಸೂಚಿ ದರಪಟ್ಟಿ;2021-22 ಸಂಪುಟ-5ನ್ನು ದಿನಾಂಕ:25.03.2022 ರಿಂದ ಜಾರಿಗೆ ಬರುವಂತೆ ಉಲ್ಲೇಖ (3) ರ ಜ್ಞಾಪನಾ ಪತ್ರದಲ್ಲಿ ಅಳವಡಿಕೆಗೆ ಪ್ರಕಟಿಸಲಾಗಿದೆ.

ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ಮುಖ್ಯ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ, ಇವರು ಕೆ.ಯು.ಡಬ್ಲ್ಯು.ಎಸ್.ಎಸ್.ಬಿ, ಮತ್ತು ಆರ್.ಡಿ.ಡಬ್ಲ್ಯು&ಎಸ್.ಡಿ ಇಲಾಖೆಗಳೊಂದಿಗೆ ಸಮಾಲೋಚಿಸಿ ಎಲ್ಲಾ ರೀತಿಯ ಕೊಳವೆಗಳ (Pipes) ಬೆಲೆಗಳನ್ನು ಪ್ರತಿ ತ್ರೈಮಾಸಿಕ ಅವಧಿಗೆ ಅಥವಾ ಶೇ. 10% ಕ್ಕಿಂತ ದರ ವ್ಯತ್ಯಾಸವಾದಲ್ಲಿ ಪರಿಷ್ಕೃತ ದರಗಳನ್ನು ಪ್ರಕಟಮಾಡಬೇಕಾಗಿರುತ್ತದೆ.

ಈ ಸಂಬಂಧ 2022-23ನೇ ಆರ್ಥಿಕ ವರ್ಷದಲ್ಲಿ ಉಲ್ಲೇಖ (4) ಹಾಗೂ (5) ರ ಜ್ಞಾಪನಾ ಪತ್ರಗಳ ಮೂಲಕ ಪರಿಷ್ಕೃತ ದರಗಳನ್ನು ರಾಜ್ಯ ವ್ಯಾಪ್ತಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳುವ ಎಲ್ಲಾ ಇಲಾಖೆಗಳಿಗೆ ಅನ್ವಯವಾಗುವಂತೆ ಜಾರಿಗೆ ತರಲಾಗಿರುತ್ತದೆ. ಸದರಿ ಜ್ಞಾಪನಾ ಪತ್ರಗಳಲ್ಲಿನ ಕೋಷ್ಟಕದಲ್ಲಿ ಸೂಚಿಸಿರುವ ನಿರ್ದಿಷ್ಟ ಕೊಳವೆ ಅಂಶಗಳ ಕೋಡ್‌ಗಳಿಗೆ ಅನ್ವಯವಾಗುವಂತೆ ದರಗಳನ್ನು ಶೇಕಡವಾರು ಹೆಚ್ಚಳದೊಂದಿಗೆ ಅಳವಡಿಸಿಕೊಳ್ಳುವುದಕ್ಕೆ ಆದೇಶಿಸಲಾಗಿರುತ್ತದೆ. ಕೊಳವೆಗಳ ದರಗಳನ್ನು ಶೇಕಡವಾರು ಹೆಚ್ಚುವರಿ ಮಾಡಿ ಪರಿಷ್ಕರಿಸಿರುವುದನ್ನು ಮುದ್ರಿತ ಏಕರೂಪ ಅನುಸೂಚಿ ದರಪಟ್ಟಿ;2021-22 ಸಂಪುಟ-5ರ ಕೊಳವೆ ಅಂಶಗಳ **finished rate ಗಳಿಗೆ ಅನ್ವಯಿಸುವಂತೆ ಪರಿಗಣಿಸಬೇಕಾಗುತ್ತದೆ.**

ಉಲ್ಲೇಖ (6)ರಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ರವರು ಕೋರಿರುವಂತೆ ಕೆಲವು ವಿಶೇಷ ಸಂದರ್ಭಗಳಲ್ಲಿ Data Rates ಗಳನ್ನು ತಯಾರಿಸಲು ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳುವ ಎಲ್ಲಾ ಇಲಾಖೆಗಳ ಉಪಯೋಗಕ್ಕಾಗಿ M S ಕೊಳವೆಗಳ ಪರಿಷ್ಕೃತ ದರಗಳನ್ನು ಪ್ರಕಟಮಾಡಲು ಪರಿಗಣಿಸಿರುವ M S ಪ್ಲೇಟ್‌ಗಳ ಮೂಲ ದರಗಳನ್ನು ಕೆಳಗಿನ ಕೋಷ್ಟಕದಲ್ಲಿ ಸ್ಪಷ್ಟೀಕರಿಸಲಾಗಿದೆ:

| ಜ್ಞಾಪನಾ ಪತ್ರದ ಸಂಖ್ಯೆ | ಜ್ಞಾಪನಾ ಪತ್ರದ ದಿನಾಂಕ | ಚಾಲ್ತಿ ಅವಧಿ | M S ಕೊಳವೆಗಳ ಪರಿಷ್ಕೃತ ದರಗಳನ್ನು ಪ್ರಕಟಮಾಡಲು ಪರಿಗಣಿಸಿರುವ M S ಪ್ಲೇಟ್‌ಗಳ ಮೂಲ ದರ |
|---|---|---|---|
| ಉಲ್ಲೇಖ (4)ರಲ್ಲಿರುವಂತೆ | 05.04.2022 | 05.04.2022 ರಿಂದ 06.07.2022 ರವರೆಗೆ | Rs. 81,050/- per MT. |
| ಉಲ್ಲೇಖ (5)ರಲ್ಲಿರುವಂತೆ | 07.07.2022 | 07.07.2022 ರಿಂದ ಮುಂದಿನ ಆದೇಶದವರೆಗೆ | Rs. 68,200/- per MT. |

ಈ ಸುತ್ತೋಲೆಯು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕೃತ ಜಾಲತಾಣ **www.bwssb.karnataka.gov.in** ನಲ್ಲಿ ಲಭ್ಯವಿರುತ್ತದೆ.

ಮುಖ್ಯ ಅಭಿಯಂತರರು (ವಿನ್ಯಾಸ ಮತ್ತು ಗುಣ ಆಶ್ವಾಸನೆ)
ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಹಾಗೂ ಏಕರೂಪ ದರಪಟ್ಟಿ ಸಮಿತಿ ಅಧ್ಯಕ್ಷರು

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ಅನುಸೂಚಿ ದರಗಳ ಪರಿಶೀಲನಾ ಸಮಿತಿ ರವರ ಘನ ಮಾಹಿತಿಗಾಗಿ.
2. ಸರ್ಕಾರದ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ಅನುಸೂಚಿ ದರಗಳ ರಚನಾ ಸಮಿತಿ ರವರ ಘನ ಮಾಹಿತಿಗಾಗಿ.
3. ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ/ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು / ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು, ರವರ ಘನ ಮಾಹಿತಿಗಾಗಿ.
4. ಸರ್ಕಾರದ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ (ವೆಚ್ಚ), ಬೆಂಗಳೂರು ರವರ ಘನ ಮಾಹಿತಿಗಾಗಿ.
5. ಅಧ್ಯಕ್ಷರು, ತಾಂತ್ರಿಕ ಕಾರ್ಯಪಡೆ, ಬೆಂಗಳೂರು, ಏಕರೂಪ ಅನುಸೂಚಿ ದರಪಟ್ಟಿ ರವರ ಘನ ಮಾಹಿತಿಗಾಗಿ.
6. ಪ್ರಧಾನ ಅಭಿಯಂತರರು/ಮುಖ್ಯ ಅಭಿಯಂತರರು BWSSB, KUWS&DB and RDW&SD ಹಾಗೂ ಸರ್ಕಾರದ ಇತರ ಇಲಾಖೆ / ನಿಗಮ / ಮಂಡಳಿ ರವರ ಮಾಹಿತಿಗಾಗಿ.
7. ಅಧೀಕ್ಷಕ ಅಭಿಯಂತರರು / ಅಪರ ಮುಖ್ಯ ಅಭಿಯಂತರರು BWSSB, KUWS&DB and RDW&SD ಹಾಗೂ ಸಮಿತಿಯ ಸದಸ್ಯರು ಹಾಗೂ ಸರ್ಕಾರದ ಇತರೆ ಇಲಾಖೆ/ನಿಗಮ ಮಂಡಳಿ ರವರ ಮಾಹಿತಿಗಾಗಿ.
8. ಎಲ್ಲಾ ಕಾರ್ಯ ಪಾಲಕ ಅಭಿಯಂತರರು, ಸರ್ಕಾರದ ಎಲ್ಲಾ ಇಲಾಖೆ/ ನಿಗಮ/ ಮಂಡಳಿ ರವರ ಮಾಹಿತಿಗಾಗಿ.
9. ಕಛೇರಿ ಕಡತಕ್ಕಾಗಿ.